ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಬೆಳಗಾವಿಯಲ್ಲಿ ಅತಿಕ್ರಮಣ ಮಾಡಿದ ಭೂಮಿಯಲ್ಲಿ ಬಡ ಕುಟುಂಬದವರೇ ಹೆಚ್ಚಾಗಿದ್ದಾರೆ. ೧೯೭೮ಕ್ಕಿಂತ ಮುಂಚೆ ಅತಿಕ್ರಮಣ ಮಾಡಿರುವವರಿಗೂ ಆರಣ್ಯ ಇಲಾಖೆಯವರು ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಬಡಜನರಿಗೆ ತೊಂದರೆ ಕೊಡದಂತೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಯಾರಿಗೂ ತೊಂದರೆ ಕೊಡುವ ಉದ್ದೇಶ ಸರ್ಕಾರಕ್ಕಿಲ್ಲ. ಸಕ್ರಮ ಗೊಳಿಸುವುದಕ್ಕೆ ಪ್ರಯತ್ನಪಟ್ಟು ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೇವೆ. ಕೇಂದ್ರ ಸರ್ಕಾರ ತನ್ನ ನೀತಿ ನಿಯಮಗಳನ್ನು ರಾಜ್ಯ ಸರ್ಕಾರಕ್ಕೆ ತಿಳಿಸುವವರೆಗೆ ನಾವು ಈ ವಿಷಯದಲ್ಲಿ ಏನನ್ನೂ ಮಾಡುವುದ ಕ್ಕಾಗುವುದಿಲ್ಲ. ಆದರೆ ಅತೀ ಕಡುಬಡವರಿಗೆ ತೊಂದರೆ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಪಡುವುದಿಲ್ಲ ಕೇಂದ್ರ ಸರ್ಕಾರದಿಂದ ನೀತಿ ನಿಯಮಗಳು ಬಂದಮೇಲೆ ಭೂ ರಹಿತರಿಗೆ ಮೂರು ಎಕರೆ ಭೂಮಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಹೊಸದುರ್ಗ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ರಿಪೇರಿ ಮಾಡುವ ಬಗ್ಗೆ.

೨೩೩. ಶ್ರೀ ಜಿ. ಬಸಪ್ಪ (ಹೊಸದುರ್ಗ)—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ.—

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರದ ರಸ್ತೆಗಳಲ್ಲಿ ಬಸ್ಸುಗಳು ಸಂಚರಿಸುತ್ತಿದ್ದರೂ ರಿಪೇರಿ ಮಾಡುತ್ತಿಲ್ಲವಾದ್ದರಿಂದ ಅಂಥ ರಸ್ತೆಗಳನ್ನು ಲೋಕೋಪ ಯೋಗಿ ಇಲಾಖೆಗೆ ಸೇರಿಸಿ ಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹಂತ ಹಂತವಾಗಿ ಹಣಕಾಸಿನ ಲಭ್ಯತೆಯನ್ನು ಅನುಸರಿಸಿ ಇಲಾಖೆಗೆ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಹೆಚ್ಚಿನ ವಿವರಣೆ ಕೊಡಬೇಕಾಗಿದೆ. ದಿನಾಂಕ ೨೧-೪-೧೯೮೩ರಲ್ಲಿ ರಾಜ್ಯ ಸರ್ಕಾರ ವಿವಿಧ ತಾಲ್ಲೂಕುಗಳಲ್ಲಿ ಮುಖ್ಯತರ ಕಡೆಗಳಲ್ಲಿ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ವಹಿಸಿಕೊಳ್ಳುವ ಬಗ್ಗೆ ಪ್ರೊಪೋಸಲ್ ಕಳುಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿತ್ತು. ಅದರ ಪ್ರಕಾರ ೮,೨೪೦ ಕಿಲೋಮೀಟರ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ವಹಿಸಿ ಕೊಳ್ಳುವುದಕ್ಕೆ ಅಧಿಕಾರಿಗಳಿಂದ ಪ್ರೊಪೋಸಲ್ ಬಂದಿದೆ. ಅದು ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ,

In Hosadurga Taluk, the following roads are proposed to be taken over to P.W.D. for maintenance/improvements.

A. Completed ICRC Roads.—

1. Road from Kellodu to Machenahalli via Mettenahole Length 7.00 K. M.
2. Road from kurubarahatti, Mali enahatti, Somanahatti and on to Gavirangapura. Lenght 4.58 K. M.
3. Road from Haragondanhalli to Nelgere; length 5 K. M.
4. Approach road to Kodihalli and on to Neeragunda 5.00 K. M.

B. Completed MNP Roads.—

1. Road from approach road to Honnakere 4-00 K. M.
2. Road from approach road to Chinnasamudra 3.00 K. M.
3. Road from approach road to Arehalli 3.00 K. M.

C. Other important non PWD roads.—

1. Burudekatti to Hosadurga Railway Station via Jammapura Chikkammanhally. 6.30 K. M.
2. Bellalasamudra Kaval to join H. A. Road via Bammenahally Thorachannahatti; 8-00 K. M.
3. Kondajji to jisn T. H. Road via Thippajjinahatti Marabag hatti; 4.00 K. M.

ಈ ರೀತಿ ಪ್ರೊಪೋಸಲ್ ಕಳುಹಿಸಿದ್ದಾರೆ. ಸರ್ಕಾರ ಈ ಬಗ್ಗೆ ಇನ್ನೂ ನಿರ್ಣಯ ತೆಗೆದುಕೊಂಡಿಲ್ಲ.

ಶ್ರೀ ಜಿ. ಬಸಪ್ಪ —ಈ ವರ್ಷ ಎಷ್ಟು ಕಿಲೋಮೀಟರ್ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೀರಿ ?

ಶ್ರೀ ಎಚ್. ಡಿ. ದೇವೇಗೌಡ.—ಒಟ್ಟು ರಾಜ್ಯದಲ್ಲಿ ೮೨೪೦ ಕಿಲೋಮೀಟರ್ ರಸ್ತೆ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳು ವರದಿ ಕಳುಹಿಸಿದ್ದಾರೆ. ಎಲ್ಲಾ ತಾಲ್ಲೂಕುಗಳ ಬಗ್ಗೆ ವರದಿ ಬಂದಿದೆ. ಹಣಕಾಸಿನ ದೃಷ್ಟಿಯಿಂದ ಇದನ್ನು ನಿರ್ಣಯ ಮಾಡಬೇಕಾಗುತ್ತದೆ. ಇದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ರಾಜ್ಯದಲ್ಲಿರುವ ಅರಣ್ಯ ಜಮೀನಿನ ವಿಸ್ತೀರ್ಣದ ಬಗ್ಗೆ

೨೬೦. ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರಾಜ್ಯ ಅರಣ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು),

ಆ) ಭಾರತದ ಇತರ ರಾಜ್ಯಗಳೊಡನೆ ಹೋಲಿಸಿದರೆ ದಶಮಾಂಶ ಎಷ್ಟು;

ಇ) ರಾಜ್ಯದ ಅರಣ್ಯಗಳಿಂದ ಬರುವ ಉತ್ಪನ್ನ ಎಷ್ಟು ?

ಶ್ರೀ ಬಿ. ಎ. ಜೀವಿಜಯ (ರಾಜ್ಯ ಅರಣ್ಯ ಮಂತ್ರಿಗಳು).—

ಕರ್ನಾಟಕ ರಾಜ್ಯದಲ್ಲಿ ಅರಣ್ಯಪ್ರದೇಶವು ಒಟ್ಟು ೩೮,೪೦೮-೪೮ ಚದರ ಕಿಲೋಮೀಟರ್‌ಗಳಷ್ಟಾಗಿರುತ್ತದೆ. (ಅಂದರೆ ೩೮,೪೦,೪೮೪ ಹೆಕ್ಟೇರುಗಳು) ಕರ್ನಾಟಕ ರಾಜ್ಯದ ಜಿಲ್ಲಾವಾರು ಅರಣ್ಯ ವಿಸ್ತೀರ್ಣ ಈ ರೀತಿಯಿದೆ.—

ಜಿಲ್ಲೆಯ ಹೆಸರು		ವಿಸ್ತೀರ್ಣ (ಚ.ಕಿ.ಮೀ)
೧) ಬೆಂಗಳೂರು	...	೧೧೬೮.೫೫
೨) ಬೆಳಗಾಂ	...	೨೨೨೬.೬೫
೩) ಬಳ್ಳಾರಿ	...	೧೭೪೩.೫೩
೪) ಬೀದರ್	...	೪೮೨.೫೧